ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು

ಸ್ಪೆಷಲ್ ಕೇಸ್ ನಂಬ್ರ 184/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಶಾನ್ ಕುಮಾರ | ಫ್ರಾಸಾಃ 4 |
| ತಂದೆಯ ಹೆಸರು | : | ಸುದೀಪ್ ಕುಮಾರ್ | ಚಾಸಾಃ 2 |
| ಪ್ರಾಯ | : | 30 ವರ್ಷ | ದಿನಾಂಕಃ 21.08.2024 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಡ್ರೈವರ್ | |
| ವಾಸಸ್ಥಳ | : | ಶಿವಭಾಗ್, ಮಂಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

3-4 ವರ್ಷಗಳ ಹಿಂದೆ ಕದ್ರಿ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿದ್ದರು. ಅಲ್ಲಿ ನನಗೆ ಸಹಿ ಮಾಡಲು ಹೇಳಿ ಸಹಿ ಪಡೆದಿರುತ್ತಾರೆ. ಅಲ್ಲಿಂದ ಪೊಲೀಸರು ನನ್ನನ್ನು ಎಲ್ಲಿಯೂ ಕರೆದುಕೊಂಡು ಹೋಗಿಲ್ಲ. ನ್ಯಾಯಾಲಯದಲ್ಲಿರುವ ಆರೋಪಿಯನ್ನು ನಾನು ಈ ಹಿಂದೆ ನೋಡಿಲ್ಲ ಹಾಗೂ ನನ್ನ ಸಮಕ್ಷಮ ಅವನಿಂದ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ. ಈಗ ನೋಡಿದ ಮಹಜರ್ (ನಿಪಿ-2) ಹಾಗೂ ನೋಟೀಸ್ ನಲ್ಲಿ ಇರುವ ಸಹಿ ನನ್ನದು ಇದೆ. ಮಹಜರ್ ನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ನೋಟೀಸನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

2) 07.09.2020ರಂದು ಪೊಲೀಸರು ಮಧ್ಯಾಹ್ನ 3.30ಕ್ಕೆ ಠಾಣೆಯಿಂದ ಕರೆದುಕೊಂಡು ಶಿವಭಾಗ್ 5ನೇ ಕ್ರಾಸ್ ಹತ್ತಿರ ಹೋಗಿದ್ದು ಆ ಸಮಯದಲ್ಲಿ ಕೆಎ-19-ಇಝಡ್-2912 ನೋಂದಣಿ ಸಂಖ್ಯೆಯ ಸ್ಕೂಟರ್ ನಲ್ಲಿ ನ್ಯಾಯಾಲಯದಲ್ಲಿರುವ ಆರೋಪಿ ಬಂದಿದ್ದು ಅವನನ್ನು ತಡೆದು ನಿಲ್ಲಿಸಿ ವಿಚಾರಿಸಿ ಅವನ ಹತ್ತಿರ ಇದ್ದ ಪಾಲಿಥೀನ್ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಗಮ್ ಟೇಪ್‌ನಿಂದ ಸುತ್ತಿದ್ದ ಕಟ್ಟೊಂದು ದೊರಕಿದ್ದು ಅದರಲ್ಲಿ ಗಾಂಜಾ ಇದೆ ಎಂದು ಅವನು ಹೇಳಿದ್ದು ಅವನಿಗೆ ನೋಟೀಸ್ ನೀಡಿ ಪತ್ರಾಂಕಿತ ಅಧಿಕಾರಿ ಸಮಕ್ಷಮ ಅವನ ಅಂಗಶೋಧನೆ ನಡೆಸಿದ್ದು ಅವನ ಹತ್ತಿರ ಒಂದು ಮೊಬೈಲ್ ದೊರಕಿತ್ತು ಹಾಗೂ ಬ್ಯಾಗ್ ನಲ್ಲಿ 2.200ಕೆಜಿ ತೂಕದಷ್ಟು ಗಾಂಜಾ ಇದ್ದು ಪೊಲೀಸರು ಪ್ಲಾಸ್ಟಿಕ್ ಚೀಲ, ಗಾಂಜಾ, ಮೊಬೈಲ್ ಹಾಗೂ ಸ್ಕೂಟರನ್ನು ಮಹಜರ್ ಮಾಡಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು ನಾನು ಅಲ್ಲಿ ಮಹಜರಿಗೆ ಸಹಿ ಮಾಡಿದ್ದೇನೆ ಎಂದು ಹೇಳುವುದು ಸರಿಯಲ್ಲ. ಈಗ ನೋಡಿದ ಮೊಬೈಲ್, ಪಾಲಿಥೀನ್ ಚೀಲ (ಮುಮಾ-1,

ಮುಮಾ-2) ಫೋಟೋದಲ್ಲಿ (ನಿಪಿ-3) ಕಾಣುವ ಸ್ಕೂಟರನ್ನು ಅಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳುವುದು ಸರಿಯಲ್ಲ. ಈ ಕುರಿತಂತೆ ನಾನು ಹೇಳಿಕೆ ನೀಡಿದ್ದೇನೆ ಅನ್ನುವುದು ಸರಿಯಲ್ಲ. ಪೋಲೀಸರು ದಾಖಲಿಸಿಕೊಂಡ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್., ವಕೀಲರಿಂದಃ
ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.